ಇದೀಗ... ಬೆಳಿಗ್ಗೆ ಬೆಳಿಗ್ಗೆಯೇ ಅಪ್ಪ ಆಫೀಸಿಗೆ ಹೊರಟು ಹೋದೊಡನೆ, ತೆಂಗಿನಕಾಯಿ ತುರಿಯುತ್ತಿದ್ದ ಅಮ್ಮನ ಬೆನ್ನಿಗೆ ಜೋತು ಬಿದ್ದು ತಾನು ಕೇಳಿದ್ದ ಪ್ರಶ್ನೆಗೆ ಕುಮುದಳಿಂದ ಸ್ಪಷ್ಟ ಉತ್ತರ ಬರದಿದ್ದಾಗ ಕೌಶಿಕನು, “ಅಮ್ಮ... ಹೇಳಮ್ಮ... ರಜೆಗೆ ಅಜ್ಜನ ಮನೆಗೆ ಹೋಗುದು ಯಾವಾಗ?...' ಎಂದು ಒತ್ತಾಯಪೂರ್ವಕವಾಗಿ ಕೇಳಿದಾಗ, ಆಕೆ : 'ಹೋಗೋಣ ಮಾರಾಯ... ಅಪ್ಪ ನಿಂಗೆ ಹೊಸ ಶಾಲೆ, ಹೊಸ ಯುನಿಫಾರಂ, ಹೊಸ ಬ್ಯಾಗು, ಹೊಸ ಟೈ, ಕೊಡಿಸುವುದಿದೆಯಂತೆ... ನಂತ್ರ ಅಜ್ಜನ ಮನೆಗೆ... ಹೋಗುದು' ಎಂದು ಸಮಾಧಾನದ ಮಾತುಗಳನ್ನು ಹೇಳಿದ್ದಾಳಷ್ಟೆ...

'ನಂಗೆ ಏನೂ ಬೇಡ ಹೊಸತ್ತು... ನಂಗೆ ಹಳೆ ಸ್ಕೂಲೇ ಸಾಕು; ಹಳೆ ಯುನಿಫಾರ್ಮೇ ಸಾಕು. ಅಪ್ಪ ನಿನ್ನೆ ರಾತ್ರಿ ಹೇಳಿದ್ದೆಲ್ಲವೂ ನಂಗೆ ಕೇಳ್ಸಿದೆ...' ಎಂದು ಕೌಶಿಕ ಬಾಯ್ಕೊಟ್ಟು ಅಳತೊಡಗಿದಾಗ, ಕುಮುದ ಕೈಯಲ್ಲಿದ್ದ ಕೆಲಸವನ್ನಲ್ಲೇ ಬಿಟ್ಟು, 'ಇಲ್ಲ... ಬಂಗಾರ... ಇವತ್ತು ಸ್ವಲ್ಪ, ನಾಳೆ ಸ್ವಲ್ಪ, ನಾ...ಡಿದ್ದು ಸ್ವಲ್ಪ ಹೋಂವರ್ಕ್ ಮಾಡಿ... ಮತ್ತೆ ನಾವು ಸೀದ ಅಜ್ಜನ ಮನೆಗೇ ಹೋಗುದೆ... ಮತ್ತೆ ಇಲ್ಲಿ ನಿಲ್ಲಿಕ್ಕೇ ಇಲ್ಲ...' ಎಂದು ಇನ್ನೇನೋ ಕತೆ ಹೇಳಬೇಕೆನ್ನುವಷ್ಟರಲ್ಲಿ, 'ನಾನಿವತ್ತು ರಾತ್ರಿ ಹೋಂವರ್ಕ್ ಮಾಡಲ್ಲ... ಮಾಡಲ್ಲ, ಮಾಡೋದೆ ಇಲ್ಲ, ನಾನು ಹಳೆಯ ಪುಸ್ತಕನೂ ಓದಲ್ಲ, ಮಗ್ಗಿನೂ ಹೇಳಲ್ಲ...'

'ಆಯ್ತಪ್ಪ ರಾಜ... ಸುಮ್ನಿರು, ಅಳ್ಬೇಡ... ನನ್ನ ಜಾಣ ಬಂಗಾರ ಅಲ್ವ ನೀನು...'

'ಅಲ್ವೇ... ಅಲ್ಲ. ನೀನೂ ಬೇಡ, ಅಪ್ಪನೂ ಬೇಡ; ನಾನೀಗ್ಲೇ ಬಂಡೀಪುರಕ್ಕೆ ಹೋಗ್ತೀನಿ. ಅಲ್ಲಿ ಹುಲಿ ಜೊತೆ ಇರ್ತೀನಿ... ನಿಮ್ಗೆ ಹುಲಿ ಕಚ್ಚಿಸ್ತೀನಿ...'

'ಅಯ್ಯೋ ದೇವ್ರೇ... ಅಲ್ಲವೋ ಮಾರಾಯ ಮೊನ್ನೆ ಮೈಸೂರಲ್ಲಿ ನಾನೇ ನಿಂಗೆ ಹುಲಿ ತೋರಿಸಿದ್ದಲ್ವ!? ಆಗ ನೀನು ಹೆದರ್ಕೊಂಡೆ... ಪುಕ್ಲ... ಈಗ ಬಂಡೀಪುರದ ಹುಲಿ ನಿಂಗೆ ಫ್ರೆಂಡ್ ಆಗಿ ಬಿಡ್ತಾ?!...' ಎಂದು ಆತನನ್ನು ಮಾತಿಗೆಳೆದು, ಆತನ ಯೋಚನೆಯ ದಿಕ್ಕನ್ನು ತಪ್ಪಿಸಲು ಕುಮುದ ಪ್ರಯತ್ನಿಸ್ತಿರ್ಬೇಕಾದ್ರೆ–

'...ನಾನು ಹುಲಿ ಜೊತೆನೇ ಹೋಗ್ತೀನಿ. ರಾತ್ರಿ ನಾನು ಹೋಂವರ್ಕ್ ಮಾಡಲ್ಲ. ಮಗ್ಗಿ ಪುಸ್ತಕವನ್ನೂ ಹುಲೀಗ್ ಕೊಡ್ತೇನೆ...'

ಮಗನ ಒಡಲಲ್ಲಿ ಹುದುಗಿರುವ ಆಕ್ರೋಶ, ಅಸಹನೆ ಕಂಡು ತಾಯಿ ಹನಿಗಣ್ಣಾದರೂ ಮುಖದಲ್ಲಿ ಒಂದು ಪದರ ನಗುವರಳಿಸಿಕೊಂಡು, 'ಯಾಕಪ್ಪ ರಾಜಾ..., ನನ್ನನ್ನು ಒಬ್ಬಳನ್ನೇ ಇಲ್ಲಿ ಬಿಟ್ಟು, ನೀನೊಬ್ನೆ ಹುಲಿ ಜೊತೆ ಇರ್ಬೇಕು!?...' ಅಂತಾ ಅಮ್ಮ ಕೇಳಿದ್ರೆ 'ಅಪ್ಪನನ್ನು ನನ್ನ ಫ್ರೆಂಡ್ ಹುಲಿಯತ್ರ ಕಚ್ಚಿಸ್ತೀನಿ...'

ಮೊನ್ನೆ, ...ಮೊನ್ನೆ ತಾನೆ ಕುಮುದ, ಪರೀಕ್ಷೆ ಬರೆದು ಬಂದ ಕೌಶಿಕನಿಗೆ ಟೀವಿ ಹಾಕಿ ಬಂಡೀಪುರದ ಸಾಕ್ಷ್ಯ ಚಿತ್ರವನ್ನು ತೋರಿಸಿದ್ದಳು. ಆತನಿಗಂತೂ ಟೀವಿಯಲ್ಲಿ ವೈಲ್ಡ್‌ಲೈಫ್, ಪ್ರಾಣಿ, ಮೀನು, ಕಾಡುಗಳನ್ನು ನೋಡುವುದೆಂದರೆ ಇಷ್ಟವೋ ಇಷ್ಟ. ಆತನ ಪ್ರಾಣಿಪಕ್ಷಿಗಳ ಬಗ್ಗೆ ತಿಳಿದುಕೊಂಡಷ್ಟು ತಾಯಿ ಕುಮುದಳೂ ತಿಳಿದುಕೊಂಡಿಲ್ಲ.

ತನ್ನ ಮಗುವಿನ ಮನಸ್ಸು, ಈ ಒತ್ತಾಯದ ಕಲಿಕೆಯ ಹಿಂಸೆಯಿಂದ ಕಲ್ಲಾಗುತ್ತಿರುವುದನ್ನು ಕುಮುದ ಎಂದೋ ಗಮನಿಸಿದ್ದರೂ, ಈ ಕಲಿಕೆಯ 'ವ್ಯವಸ್ಥೆಯಿಂದ ಆತನನ್ನು ಹೇಗೆ ಪಾರು ಮಾಡಬೇಕೆಂಬುದನ್ನು ಯೋಚಿಸಿ ಯೋಚಿಸಿಯೇ ಆಕೆ ಮೆತ್ತಗಾಗಿದ್ದಳು. ಶಾಲೆಯಿಂದ ಮಗು ಹಿಂದಿರುಗಿದೊಡನೆ, ಆತನಿಗೆ ಇಷ್ಟವಾಗುವುದನ್ನು ತಿನ್ನಿಸಿ, ಆತನಿಗಿಷ್ಟದ ಟೀವಿ ಚಾನಲ್ ಹಾಕಿ